# ಹೈದರಬಾದ್ ಕರ್ನಾಟಕ ಆಧುನಿಕ ವಚನ ಸಾಹಿತ್ಯ

ಮಲ್ಲಯ್ಯ

ಕನ್ನಡ ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜ್, ದೇವದುರ್ಗ, ರಾಯಚೂರು.

DOI: https://doi.org/10.5281/zenodo.17257657

## ABSTRACT:

ಹನ್ನೆರಡನೆಯ ಶತಮಾನದಲ್ಲಿ ಶರಣರು ರೂಪಿಸಿದ ವಚನ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಸಮಾಜೋದ್ಧಾರಕ, ಧಾರ್ಮಿಕ ಕ್ರಾಂತಿಕಾರಕ ಹಾದಿಯನ್ನು ತೋರಿಸಿತು. ಆ ಪರಂಪರೆಯ ಪ್ರಭಾವದಿಂದ ಆಧುನಿಕ ಕಾಲದಲ್ಲಿಯೂ ಹೊಸ ರೂಪ, ಹೊಸ ಚಿಂತನೆಗಳನ್ನು ಪ್ರತಿಬಿಂಬಿಸುವ ಆಧುನಿಕ ವಚನ ಸಾಹಿತ್ಯ ಹುಟ್ಟಿಕೊಂಡಿದೆ. ವಿಶೇಷವಾಗಿ ಹೈದರಬಾದ್ ಕರ್ನಾಟಕ ಪ್ರದೇಶದಲ್ಲಿ ಸಮಾಜದ ನಾನಾ ವರ್ಗಗಳ ವ್ಯಕ್ತಿಗಳು; ಸಾಹಿತಿಗಳು, ಶಿಕ್ಷಕರು, ವೃತ್ತಿಜೀವಿಗಳು, ಮಹಿಳೆಯರು, ಮಠಾಧೀಶರು, ಕವಿಗಳು, ವಕೀಲರು ಮುಂತಾದವರು, ತಮ್ಮ ಅನುಭವ, ಸಂವೇದನೆ, ಚಿಂತನೆಗಳನ್ನು ಆಧುನಿಕ ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಧರ್ಮಆಧ್ಯಾತ್ಮಕ್ಕಿಂತ ಸಾಮಾಜಿಕ ಜಾಗೃತಿ, ಮಾನವೀಯ ಮೌಲ್ಯಗಳು, ಸಮಾನತೆ, ವಿಜ್ಞಾನ, ಶಿಕ್ಷಣ, ಶೋಷಣೆ ವಿರುದ್ಧದ ಬಂಡಾಯದ ಧ್ವನಿಗಳು ಹೆಚ್ಚು ಒತ್ತು ಪಡೆದಿವೆ. ಡಾ.ಸಿದ್ಧಯ್ಯ ಪುರಾಣಿಕ, ಡಾ.ಶೈಲಜಾ ಉಡಚಣ, ಡಾ.ಚನ್ನಣ್ಣ ವಾಲೀಕಾರ, ಡಾ.ಕೆ.ಬಿ.ಬ್ಯಾಳಿ, ಸತ್ಯಜ್ಞ, ಬಿ.ಎಸ್.ಖುಬಾ ಮುಂತಾದ ವಚನಕಾರರು ಹೊಸ ದಾರಿಯನ್ನು ತೆರೆದಿದ್ದಾರೆ. ಇವರು ವಚನದ ಮೂಲ ಪರಂಪರೆಯನ್ನು ಅನುಸರಿಸಿದರೂ ಅದಕ್ಕೆ ಆಧುನಿಕ ರೂಪ, ಶೈಲಿ, ವೈಜ್ಞಾನಿಕತೆ, ಸಾಮಾಜಿಕ ಪ್ರಜ್ಞೆಯನ್ನು ತುಂಬಿದ್ದಾರೆ. ಹೈದರಬಾದ್ ಕರ್ನಾಟಕದ ಆಧುನಿಕ ವಚನ ಸಾಹಿತ್ಯವು ಕನ್ನಡ ನಾಡಿನ ಆಧುನಿಕ ವಚನ ಚಳವಳಿಗೆ ಪ್ರಾದೇಶಿಕ ವೈಶಿಷ್ಟ್ಯವನ್ನು ನೀಡುವುದರೊಂದಿಗೆ ಭವಿಷ್ಯದ ಅಧ್ಯಯನಕ್ಕೆ ಸಮೃದ್ಧ ನೆಲೆಯನ್ನು ಒದಗಿಸಿದೆ.

## KEYWORDS:

ವಚನ ಸಾಹಿತ್ಯ, ಆಧುನಿಕ ವಚನಗಳು, ಹೈದರಬಾದ್ ಕರ್ನಾಟಕ, ಮಾನವೀಯ ಮೌಲ್ಯಗಳು, ಶರಣ ಸಂಪ್ರದಾಯ.

ವಚನ ಸಾಹಿತ್ಯ ಹನ್ನೆರಡನೆಯ ಶತಮಾನದ ಹೊಸ ದೃಷ್ಟಿ, ಹೊಸ ಬೆಳೆ, ಹೊಸ ಬೆಳಕು, ಹೊನ್ನಬೆಳಕು, ಇದನ್ನು ಬಿತ್ತಿ ಪರಿಶುದ್ಧವಾದ ಬೆಳೆ ನೀಡಿ ಕೊಟ್ಟವರು ಶರಣರು. ಹೀಗಾಗಿ ಶರಣ ಸಾಹಿತ್ಯವಚನ ಸಾಹಿತ್ಯ ಎರಡೂ ಒಂದೇ ಆಗಿದೆ. ಇವೆರಡು ಒಂದರಳೊಂದರಲ್ಲಿ ಸೇರಿ ತನ್ನತನವನ್ನು ಮೆರೆದಿದೆ. ಜಾತಿಪಂಥ, ಮತಸಂಪ್ರದಾಯ, ಧರ್ಮಕುಲ, ಗಂಡುಹೆಣ್ಣು ಎಂಬ ಭೇದಭಾವವನ್ನು ಕಿತ್ತೊಗೆದು ಮನುಕುಲದ ಹಾಡಿಗೆ ನಾಂದಿ ಹಾಡಿವೆ. ಸಮಾಜದಲ್ಲಿ ಸಮಾನತೆ, ಸ್ವತಂತ್ರತೆ, ಭಾತೃತ್ವ ತರಬಯಸಿದ್ದು, ಸಮಾಜೋಧಾರ್ಮಿಕ ಕ್ರಾಂತಿ ಮೂಲಕ.

ವಚನ ಸಾಹಿತ್ಯದ ಮೂಲಕವೇ ಸ್ವರವಚನ, ತತ್ವಪದ, ಕೈವಲ್ಯ, ಏಕತಾರಿ, ಅನುಭಾವ ಪದಗಳು ಹನ್ನೆರಡನೆಯ ಶತಮಾನದ ತರುವಾಯದಲ್ಲಿ ಹುಟ್ಟಿಕೊಂಡು ಆಯಾ ಕಾಲ ಧರ್ಮ ರಾಜಾಶ್ರಯದ ಹಿನ್ನೆಲೆಯಲ್ಲಿ ತಂತಮ್ಮ ನೆಲೆಯಲ್ಲಿ ಬೆಳೆದು ಸಮೃದ್ಧಿಯನ್ನಾಗಿ ಮಾಡಿದವು. ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಕಾಲದಲ್ಲಿ ಶರಣರ ವಚನಸೃಷ್ಟಿ ಸಂಗ್ರಹ, ಸಂಪಾದನೆ, ಪರಿಷ್ಕರಣೆ ಆರಂಭವಾಗಿ ಸೂಕ್ತ ಹಾದಿ ಎನಿಸಿತು. ಇದರ ಮೂಲಕವೇ ಶೂನ್ಯ ಸಂಪಾದನೆಗಳು ರಚನೆಗೊಂಡವು. ಕವಿಗಳೆಲ್ಲರೂ ಶರಣರನ್ನು ಕುರಿತು ಕಾವ್ಯ ರಚಿಸಿದರು. ಇದೊಂದು ಪ್ರಾಯೋಗಿಕ ಕೆಲಸವೇ ಆಗಿದೆ. ಇದರ ಮುಂದುವರಿಕೆಯಾಗಿ ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ಆಧುನಿಕ ವಚನ ಸಾಹಿತ್ಯ ಸೃಷ್ಟಿಗೊಂಡಿದ್ದು ಮೆಚ್ಚಬೇಕು. ವಚನ ಬಹುಮುಖಿ ಸಂಸ್ಕೃತಿಯ ಅಂತರ್‌ಶೀಲದ ಅಧ್ಯಯನವಾಗಿದೆ. ಇಂದಿನ ಇಪ್ಪತ್ತೊಂದನೆಯ ಶತಮಾನದಲ್ಲಿಯೂ ವಚನಗಳು ಮಾನವೀಯ ಪ್ರಜ್ಞೆ, ಮೌಲ್ಯಗಳನ್ನು ಬಿತ್ತುತ್ತವೆ. ಹಿಗಾಗಿ ವಚನ ಸಾಹಿತ್ಯದ ವಿಸ್ತಾರತೆ ಬಹುಬೇಗ ಹರಡಿಕೊಂಡು ಬಿಟ್ಟಿದೆ. ನಿಜದ ನೆಲೆ ಅಂತರಂಗದ ಬೆಳಕಾಗಿ ಹೊರಬಂದಿದೆ. ಆಧುನಿಕ ವಚನಗಳು ಬಹುಮುಖ ನೆಲೆಯ ಚಿಂತನೆಗೆ ಹಚ್ಚುತ್ತಲಿವೆ, ಹಚ್ಚಿವೆ. ಇವುಗಳ ರಚನೆಯಿಂದ ಸಾಂಗವಾಗಿ ನಡೆದುಕೊಂಡು ಬಂದಿರುವುದು ಆಶ್ಚರ್ಯ ಹುಟ್ಟಿಸುತ್ತಿದೆ.

ಆಧುನಿಕ ವಚನ ಸಾಹಿತ್ಯ ಕುರಿತು ಗಂಭೀರವಾದ ಚರ್ಚೆಗಳು ಇನ್ನೂ ನಡೆದಿಲ್ಲ. ವಚನಗಳ ಮುಂದುವರಿಕೆ ಎಂದು ಕೆಲವರು ವಾದಿಸಿದರೆ, ಇನ್ನೂ ಕೆಲವರು ಇವು ವಚನಗಳೇ ಅಲ್ಲ ಎನ್ನುತ್ತಾರೆ. ಅಂದಿನ ವಚನ ರೂಪ, ಭಾಷೆ, ಶೈಲಿಗಳಲ್ಲಿ ಒಂದೇ ಆಗಿ ಅವುಗಳ ನಡುವೆ ಹೋಲಿಕೆಗಳಿವೆ, ಸಾಮೀಪ್ಯವಿದೆ. ಆದರೆ ಕೂದಲೆಳೆಯ ಅಂತರವನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಂತಹ ಸಂಘರ್ಷಗಳು ನಮಗೆ ಸಾಕಷ್ಟು ಎದುರಾಗುತ್ತವೆ. ಆಧುನಿಕ ವಚನ ಧರ್ಮಆಧ್ಯಾತ್ಮ ಮೀರಿ ಹೋಗಿದೆ. ವೈಚಾರಿಕತೆವೈಜ್ಞಾನಿಕತೆಗೆ ಹಚ್ಚಿದರೂ ಮೂಲ ವಚನದಂತೆ ಕಾಣಿಸಲಾರವು. ಹನ್ನೆರಡನೆಯ ಶತಮಾನದ ವಚನಕಾರರ ನಡೆನುಡಿಬದುಕುಬರಹಗಳು ಒಂದೇ ಆಗಿದ್ದವು. ಅವರು ಆಡಿದಹೇಳಿದ ವಿಚಾರಗಳು ಜನರಿಗೆ ನಾಟುತ್ತಿದ್ದವು.

ಇಂದಿನ ಆಧುನಿಕ ಕಾಲದಲ್ಲಿ ಅವುಗಳನ್ನು ಪಾಲಿಸುವುದು ಕಷ್ಟಕರವಾಗಿದೆ. ಹೀಗಿದ್ದಾಗಲೂ ಕೂಡ ಇವು ವಚನ ಅಲ್ಲ ಎಂದು ಹೇಳುವುದು ತಪ್ಪು. ವಚನದ ರೂಪ ಇಟ್ಟುಕೊಂಡು ಜನಸಾಮಾನ್ಯರಿಗೆ ಮುಟ್ಟಿಸುವ ಕ್ರಿಯೆ ಇಲ್ಲಿ ಗಮನಿಸಬೇಕಾಗಿದೆ. ಅವರು ಹೇಳುವ ವಿಚಾರ, ಚಿಂತನೆಗಳು ಮುಖ್ಯವಾಗಿ ಕಾಣಸಿಗುತ್ತವೆ. ಅವರ ಬದುಕು ಇಲ್ಲಿ ಮುಖ್ಯವಾಗುವುದಿಲ್ಲ. ಇಂತಹ ನೆಲೆಯಲ್ಲಿ ಒಂದಿಷ್ಟು ವ್ಯತ್ಯಾಸ ಕಾಣಬಹುದಾಗಿದೆ.

ಆಧುನಿಕ ವಚನಕಾರರು ತಮ್ಮ ರಚನೆಯ ಸಂದರ್ಭದಲ್ಲಿ ಅನೇಕ ಕುಂದುಕೊರತೆಗಳನ್ನು ಅನುಭವಿಸಿದವರಾಗಿದ್ದಾರೆ. ಅನುಕರಣೆ ಮಾಡಿದ್ದಾರೆ. ಭಾಷೆ, ಶೈಲಿ, ವಸ್ತು, ತಂತ್ರ, ಗಾದೆ, ಶಿಷ್ಟದ ಪ್ರಜ್ಞೆ, ದೇಶಿಗುಣ ಮುಂತಾದವುಗಳನ್ನು ಹಾಸುಹೊಕ್ಕಾಗಿ ಚಿಂತನೆಗೆ ಒಳಪಡಿಸಿ ರಚಿಸಿದ್ದಾರೆ. ಇಂದಿನ ಸಾಮಾಜಿಕ ಪ್ರಚಲಿತ ಸಂವೇದನೆಗಳನ್ನು ಇಟ್ಟುಕೊಂಡು ಆಧುನಿಕ ವಚನ ರಚನೆ ಆಗಿರುವುದೇ ಇಲ್ಲಿನ ವೈಶಿಷ್ಟ್ಯವಾಗಿದೆ. ಕರ್ನಾಟಕದಲ್ಲಿಂದು ಆಧುನಿಕ ವಚನಕಾರರು ನೂರಾರು ಜನರಿದ್ದಾರೆ. ಅವರು ಸಾವಿರಾರು ವಚನಗಳನ್ನು ಸೃಷ್ಟಿಸಿದ್ದಾರೆ.

ಆಧುನಿಕ ವಚನಗಳಿಗೆ ನಾಂದಿ ಹಾಡಿದವರು ಎನ್.ವಿ.ರಂಗಣ್ಣ, ಹರ್ಡೇಕರ್ ಮಂಜಪ್ಪ, ಸಿದ್ಧಯ್ಯ ಪುರಾಣಿಕ, ಎಸ್.ವಿ.ಪರಮೇಶ್ವರ ಭಟ್, ಜಡನಿ, ಕಟ್ಟಿಬಸಪ್ಪ, ಪಾಶ್ವನಾಥಯ್ಯ, ರಂಗರಾವ್ ದಿವಾಕರ್, ಚಂದ್ರಶೇಖರ್, ಹಂಡಿಗಿ ಸಂಗಮೇಶ, ಸಿಂಪಿ ಲಿಂಗಣ್ಣ, ಮಹಾದೇವ ಬಣಕಾರ್, ಜೋಳದರಾಶಿ ದೊಡ್ಡನಗೌಡ, ಹೊಸಮನಿ ಸಂಗಮೇಶ, ಡಾ.ಪಂಚಾಕ್ಷರಿ ಹಿರೇಮಠ, ಕುಮಾರ ಕಕ್ಕಯ್ಯ, ಮೊಳ, ಮೂಜಗಂ, ಶರಣ ಬಸವಪ್ಪ ಅಪ್ಪ, ತಿ.ನಂ.ಶ್ರೀ, ಕುವೆಂಪು, ಸದಾಶಿವಯ್ಯ, ನಂಜುಂಡಾರಾಧ್ಯ, ಗಂಗಾಧರ ಶಿವಾಚಾರ್ಯ, ಡಾ.ಶೈಲಜಾ ಉಡಚಣ, ಡಾ.ಕಮಲಾಹಂಪನಾ, ಗಂಗಮ್ಮ ಹೊಸಮನಿ, ಸಿ.ಕನಕಮ್ಮ, ತೊಗರಿ ಸರ್ವಮಂಗಳಾ ಮುಂತಾದವರಿದ್ದಾರೆ. ಇಲ್ಲಿನ ವಚನಕಾರರು ಕೂಡಾ ಒಂದೆಡೆ ಸೇರಿಲ್ಲ. ಅನುಭವ ಮಂಟಪದಲ್ಲಿ ಚರ್ಚಿಸುವಂತೆ ಚರ್ಚಿಸಿಲ್ಲ. ಇದನ್ನು ಹೊರತು ಪಡಿಸಿದರೆ ಎಲ್ಲಾ ಜಾತಿ, ವರ್ಣ, ವರ್ಗ ವ್ಯಕ್ತಿಗಳಿಂದ ಬಂದವರಾಗಿದ್ದಾರೆ. ಸ್ವಾಮಿಗಳು, ವಕೀಲರು, ಅಧ್ಯಾಪಕರು, ಸಾಹಿತಿಗಳು, ವೈದ್ಯರು ಹೀಗೆ ಹತ್ತು ಹಲವು ವರ್ಗಗಳಲ್ಲಿ ಕಾರ್ಯನಿರ್ವಹಿಸುವವರು ಆಧುನಿಕ ವಚನ ಸೃಷ್ಟಿಸಿರುವುದು ಒಂದು ಮೈಲಿಗಲ್ಲು. ಇವುಗಳನ್ನೆಲ್ಲ ಕುರಿತು ಸಮೀಕ್ಷೆ ಮಾಡುವುದು ಅಸಾಧ್ಯವಾಗಿದ್ದು, ಅರಿತುಕೊಂಡು ಕೇವಲ ಹೈದರಬಾದ್ ಕರ್ನಾಟಕದ ಆಧುನಿಕ ವಚನ ಸಾಹಿತ್ಯವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಹೈದರಬಾದ್ ಕರ್ನಾಟಕ ಮೂಲತಃ ಕಲ್ಯಾಣ ಕರ್ನಾಟಕ ಆಗಿದೆ. ಇಲ್ಲಿನ ಬೀದರ ಜಿಲ್ಲೆಯ ಬಸವಕಲ್ಯಾಣ ಶರಣರ ನಾಡಾಗಿತ್ತು. ಬಸವಾದಿ ಶರಣರು ವಚನ

ಸೃಷ್ಟಿಸಿದರು. ಜೈನರ ಕಾವ್ಯ, ಶರಣರ ವಚನ, ದಾಸರ ಕೀರ್ತನೆ, ಸ್ವರ ವಚನಕಾರರ ಅನುಭಾವ, ತತ್ವಪದಕಾರರು ತತ್ವಪದ, ಸೂಫಿ ಸಂತರ ನುಡಿಗಳು ರಚನೆಗೊಂಡವು. ಹಲವು ಭಾಷೆ, ಧರ್ಮ ಹಾಗೂ ಆಡಳಿತಕ್ಕೆ ಒಳಪಟ್ಟು, ತದನಂತರ ಅಸಮಾನತೆ, ಪ್ರಾದೇಶಿಕ ಮಲತಾಯಿ ಧೋರಣೆ ಎದುರಿಸಿ ಬಾಳುವುದೇ ಕಷ್ಟವಾದ ಹೊತ್ತಿನಲ್ಲಿ ಆಧುನಿಕ ವಚನ ಸಾಹಿತ್ಯ ಸೃಷ್ಟಿಗೊಂಡಿದೆ. ಆ ನೆಲೆಯಲ್ಲಿ ಇಲ್ಲಿನ ಆಧುನಿಕ ವಚನಗಳನ್ನು ನೋಡುವುದು ಸೂಕ್ತ.

ಇಲ್ಲಿನ ಆಧುನಿಕ ವಚನಗಳಲ್ಲಿ ಧರ್ಮ, ತತ್ವ, ಸಿದ್ಧಾಂತಗಳನ್ನು ನಾವು ಕಾಣುವುದಕ್ಕಿಂತ ಸಾಹಿತ್ಯದ ಹಿನ್ನೆಲೆಯಲ್ಲಿ ನೋಡಬೇಕಾದದ್ದು ಅಗತ್ಯವಾಗಿದೆ. ಇಲ್ಲಿನ ಸಾಹಿತ್ಯಕ, ಸಾಂಸ್ಕೃತಿಕ ಅಗತ್ಯತೆಗಳನ್ನು ಮೈಗೂಡಿಸಿಕೊಂಡು ಆಧುನಿಕ ವಚನ ರಚನೆಗೊಂಡಿದೆ. ಯಾಂತ್ರಿಕವಾದ ಜೀವನದಲ್ಲಿ ಎಲ್ಲಾ ಮನಸ್ಸುಗಳನ್ನು ಇಲ್ಲಿ ಸೇರಿ ಮಾನವೀಯ ಮೌಲ್ಯ ಬಿತ್ತಿವೆ. ಪಾಶ್ಚಿಮಾತ್ಯ ದೇಶಗಳ ಸಾಹಿತ್ಯದ ಪ್ರಭಾವ ಆಗುವುದರ ಜೊತೆಗೆ ದೇಸಿ ವರ್ಗದ ಪ್ರಭಾವ ಇಂದಿನ ಆಧುನಿಕ ವಚನಗಳ ಮೇಲಾಗಿ ಸ್ವತಂತ್ರ ಸೃಷ್ಟಿಯಾಗಿ ಹೊರಬಂದಿದೆ. ಹಳೆಯ ರೂಪಕ್ಕೆ ಹೊಸತನವನ್ನು ನೀಡಿದ್ದು, ಗಮನಾರ್ಹವಾದದ್ದು, ಸಂಕೀರ್ಣ ಮಾನವನ ಬದುಕಿನ ವಿವಿಧ ಮಜಲುಗಳನ್ನು ಅದು ಅಭಿವ್ಯಕ್ತಿಸುತ್ತದೆ.

ಹೈದರಬಾದ್ ಕರ್ನಾಟಕದ ಆಧುನಿಕ ವಚನಕಾರರು ಹೊಸತನದ ಆಚಾರವಿಚಾರಗಳ ಸಾಂಸ್ಕೃತಿಕ ಧಾರೆಯನ್ನು ವಚನದಲ್ಲಿ ಎರೆದಿದ್ದಾರೆ. ತಮ್ಮ ಸ್ವಂತದ ಅನುಭವಗಳ ಅಭಿವ್ಯಕ್ತಿಯನ್ನು ತುಂಬ ಅರ್ಥಪೂರ್ಣವಾಗಿ ಹೊರಹಾಕಿದ್ದಾರೆ. ವೀರಶೈವರಲ್ಲದವರು ಈ ಸಾಹಿತ್ಯ ಶಿಲ್ಪಕ್ಕೆ ಅನಾವರಣ ಕೊಟ್ಟಿದ್ದು ಆಧುನಿಕ ವಚನಗಳ ವೈಶಿಷ್ಟ್ಯವಾಗಿದೆ. ಇವುಗಳ ರಚನೆಕಾರರೂ ಕೂಡಾ ವಿವಿಧ ನೀತಿಯಿಂದ ಬಂದವರಾಗಿದ್ದಾರೆ. ಮಠಮಾನ್ಯಗಳ ಸ್ವಾಮೀಜಿಗಳು, ಗಮಕಿಗಳು, ಶಿಕ್ಷಕರು, ಸಾಹಿತಿಗಳು, ಮಹಿಳೆಯರು, ಕೃಷಿಕರು, ವಕೀಲರು ಹೀಗೆ ವೃತ್ತಿಅವೃತ್ತಿಯಲ್ಲಿರುವವರು, ಹಿರಿಯರು, ಕಿರಿಯರು, ವಿದ್ಯಾರ್ಥಿಗಳು ಆಧುನಿಕ ವಚನ ಸಾಹಿತ್ಯ ರಚಿಸಿರುವುದು ಹೈದರಬಾದ್ ಕರ್ನಾಟಕದ ವೈಶಿಷ್ಟ್ಯವಾಗಿದೆ. ಇಲ್ಲಿನ ವೈಶಿಷ್ಟ್ಯವೇ ಕನ್ನಡ ನಾಡಿನ ಆಧುನಿಕ ವಚನಕಾರರ ವೈಶಿಷ್ಟ್ಯವೂ ಕೂಡಾ ಆಗಿದೆ ಎಂದರೆ ತಪ್ಪಾಗಲಾರದು.

ಡಾ.ಸಿದ್ಧಯ್ಯ ಪುರಾಣಿಕರು ಕನ್ನಡ ಆಧುನಿಕ ವಚನಕಾರರಲ್ಲಿ ಅತ್ಯಂತ ಸತ್ವಶಾಲಿ ವಚನಕಾರರಾಗಿದ್ದಾರೆ. ಮೂಲತಃ ಕವಿ ಮನಸ್ಸುಳ್ಳ ಕ್ರಿಯಾಶೀಲ ವ್ಯಕ್ತಿತ್ವದ ಸೃಜನಶೀಲ ವಚನಕಾರರಾದ ಇವರು ವೃತ್ತಿಯಿಂದ ಐ.ಎ.ಎಸ್. ಅಧಿಕಾರಿಗಳಾಗಿದ್ದರು. ದಿನನಿತ್ಯದ ಅಧಿಕಾರದ ಜಂಜಾಟಗಳ ಮಧ್ಯದಲ್ಲೂ ಆಧುನಿಕ ವಚನ ರಚಿಸಿದ್ದು

ಒಂದು ವೈಶಿಷ್ಟ್ಯ ಎಂದೇ ಭಾವಿಸಬೇಕು. 'ಕಾವ್ಯಾನಂದ' ಎಂಬ ಕಾವ್ಯನಾಮದಿಂದ ಕಾವ್ಯಕ್ಷೇತ್ರದಲ್ಲಿ ಹೆಸರಾದರೆ, ಆಧುನಿಕ ವಚನ ರಚಿಸುವ ಮೂಲಕ 'ಸ್ವತಂತ್ರ ಧೀರ ಸಿದ್ದೇಶ್ವರ' ಅಂಕಿತದ ಮೂಲಕ ಗಮನ ಸೆಳೆದರು.

ಕನ್ನಡದಲ್ಲಿ ಅವ್ಯಾಹತವಾಗಿ ಆಧುನಿಕ ವಚನ ರಚಿಸಿದವರಲ್ಲಿ ಇವರು ಮೊದಲಿಗರು. ಮೂಲಶರಣರ ವಿಚಾರಧಾರೆಗಳನ್ನು ನಾವಿಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ವಚನೋಧ್ಯಾನ, ವಚನ ನಂದಿನಿ, ವಚನ ರಾಮ ಅವರ ಅದ್ಭುತ ಸೃಷ್ಟಿಯಾಗಿವೆ. ವಚನೋಧ್ಯಾನಕ್ಕೆ ಬಿಲ್ವ ಪ್ರಶಸ್ತಿ ಪಡೆದ ಏಕೈಕ ಆಧುನಿಕ ವಚನಕಾರ. ಒಂದು ಸಾವಿರದ ಐದುನೂರಕ್ಕೂ ಹೆಚ್ಚು ಆಧುನಿಕ ವಚನ ಬರೆದಿದ್ದಾರೆ. ಆಧ್ಯಾತ್ಮ, ಪ್ರಕೃತಿ, ನೀತಿ, ಉದಾರತೆ, ಕನ್ನಡ ಭಾಷೆ, ನಾಡುನುಡಿ, ಕಾಳಜಿ, ರಾಜಕೀಯ ವಿಡಂಬನೆ, ಅಸಮಾನತೆ, ಶೋಷಣೆ, ಶಿಕ್ಷಣ, ವಿಜ್ಞಾನಗಳ ಜೊತೆಗೆ ಮಾನವೀಯ ಪ್ರಜ್ಞೆ ಬಿತ್ತಿದ ವಚನಕಾರರ ಆತ್ಮ ಸಮ್ಮುಖ ಹಾಗೂ ಸಮಾಜಮುಖಿಯಾಗಿ ಬಂದಿರುವುದು.

**ವಿದ್ಯೆ ಬಂತು ವಿನಯ ಹೋಯ್ತು**
**ವಿದ್ಯೆ ಬಂತು ವಿವೇಚನೆ ಹೋಯ್ತು**
**ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು**
**ಸಿದ್ಧಯ್ಯ ಪುರಾಣಿಕ ಬಂದ ಸ್ವತಂತ್ರಧೀರ**
**ಸಿದ್ಧೇಶ್ವರ ನೋಡ.**

ಎನ್ನುವಲ್ಲಿ ಅವರ ಅಪಾರವಾದ ಮಾನವೀಯತೆಯನ್ನು ಎತ್ತಿ ಹೇಳುತ್ತವೆ. ಇದರೊಂದಿಗೆ ಕನ್ನಡ ನಾಡಿನ ಪ್ರೀತಿ ಹೊಂದಬೇಕಾದರೆ ಆತನಲ್ಲಿರಬೇಕಾದ ಮುಖ್ಯ ಗುಣಗಳನ್ನು ಕೂಡ ಹೇಳಿದ್ದಾರೆ.

**ಭಾರತ, ಕರ್ನಾಟಕ ಇದು ನನ್ನ ಸಪ್ತಾಕ್ಷರ ಮಂತ್ರವಯ್ಯ**
**ಕನ್ನಡಬಸವ ಇದು ನನ್ನ ಷಡಕ್ಷರಿ ಮಂತ್ರವಯ್ಯ**
**ಸತ್ಯಸೌಂದರ್ಯ ಇದು ನನ್ನ ಪಂಚಾಕ್ಷರಿ ಮಂತ್ರವಯ್ಯ**
**ಪ್ರೀತಿನೀತಿ ಇದು ನನ್ನ ಚತುರಾಕ್ಷರಿ ಮಂತ್ರವಯ್ಯ**
**ಕಾವ್ಯಇದು ನನ್ನ ದ್ವಿಯಾಕ್ಷರಿ ಮಂತ್ರವಯ್ಯ**
**ಇದು ನನ್ನ ಏಕಾಕ್ಷರಿ ಮಂತ್ರವಯ್ಯ**
**ಸ್ವತಂತ್ರಧೀರ ಸಿದ್ಧೇಶ್ವರಾ**

ಎಂದು ಮುಕ್ತವಾಗಿ ಅಭಿಪ್ರಾಯ ಪಟ್ಟಿದ್ದಾರೆ. ಆಧುನಿಕ ವಚನ ರಚಿಸಿದ ಹಿರಿಯರಲ್ಲಿ ಡಾ.ಶೈಲಜಾ ಉಡಚಣ ಒಬ್ಬರು. ಯಾವ ಪಂಥಗಳಿಗೂ, ವರ್ಗಗಳಿಗೂ ಒಳಗಾಗದೇ ಸ್ವತಂತ್ರವಾದ ಅಭಿವ್ಯಕ್ತಿಯನ್ನು ಕಾವ್ಯದಲ್ಲಿ ಸಿದ್ಧಿಯನ್ನು ಸಾಧಿಸಿದಾಗ

ಆಧುನಿಕ ವಚನಕ್ಕೆ ಕೈ ಹಾಕಿದ್ದಾರೆ. ಇಲ್ಲಿ ಅವರ ವಚನ ವಿಶೇಷವಾಗುವುದು. ಕೇಳುಮಗಾ, ಗಿರಿಸುತೆಯ, ಎರಡು ಆಧುನಿಕ ವಚನ ಸಂಕಲನ ಹೊರತಂದಿದ್ದಾರೆ.

ವೈಜ್ಞಾನಿಕತೆ ಇವರ ವಚನಗಳಲ್ಲಿ ಎದ್ದು ಕಾಣುತ್ತದೆ. ಹೆಣ್ಣುಗಂಡಿಗೆ ಸಂಬೋಧಿಸಿಯೇ ಮಗಾ ಎನ್ನುವ ಹೆಸರು ಬಂದಿದೆ. ಹೆಣ್ಣಿನ ಆಪ್ತತೆಯನ್ನು ಕುರಿತು, ಸಾರ್ವಕ ಮಡಿಮೆಯ ಚೆನ್ನಾಗಿದರೆ ಸಿಕ್ಕಿದ ಬದುಕಿನ ಒಡಕು ಒಡವೆಗಳಾವುವು? ಕಾಶ್ಮೀರತಾಲಿನ ಸೊಬಗು ರಂಜಿಸು. ಮತ್ತೆ ಹೊನ್ನು ಬರುವವರಿಗೆ ಬೆಚ್ಚಗಿಡಲು ಯೋಚಿಸು ನನ್ನ ಮಗಳೇ ಎನ್ನುವಲ್ಲಿ ಜೀವನದ ಅರ್ಥತೆಯನ್ನು ನಿವೇದಿಸುತ್ತಾರೆ. ಮನುಷ್ಯನ ಮಾನವೀಯತೆಯನ್ನು ಹುಡುಕಲು ಪ್ರತಿಯೊಂದು ಹಂತದಲ್ಲೂ ಪ್ರಯತ್ನಿಸಿದ್ದಾರೆ. ನಾವು ಮೊದಲು ಮನುಷ್ಯರು ಆಮೇಲೆ ಮತ್ತೆ ಗಿರಿಸುತೆಯ ನವವಚನಗಳಿಗೆ ಅಂಕಿತವಿಲ್ಲ. ಕುವೆಂಪು, ಬೇಂದ್ರೆಯವರಂತೆ ನಾವು ಬರೆದಿದ್ದನ್ನು ಕುತೂಹಲದಿಂದ ನೋಡಬೇಕಾಗಿದೆ. ದಾಂಪತ್ಯ, ಪ್ರೀತಿ, ಅನುರಾಗ, ಬದುಕಿನ ಸಾಮರಸ್ಯಗಳನ್ನು, ಜೀವಪರ ಕಾಳಜಿಗಳನ್ನು ಇವರ ವಚನಗಳಲ್ಲಿ ವಿಷ ನುಂಗುತ್ತವೆ. ಅಮೃತದ ರುಚಿ ಬೆರೆಸಿದವಳು ನೀನು ಎಂದು ಸರಸ್ವತಿಯ ಮೂಲಕ ಎಲ್ಲವನ್ನು ಒಂದೇ ಆಗಿ ನೋಡುವ ಬಗೆಯಿಂದ ಇಲ್ಲಿನ ವಚನ ಗಮನ ಸೆಳೆಯುತ್ತದೆ. ಒಂದು ನೂರ ಇಪ್ಪತ್ತು ಆಧುನಿಕ ವಚನಗಳನ್ನು ಬರೆದ ಶೈಲಜಾ ಉಡಚಣರವರು ಈ ಪ್ರದೇಶದಲ್ಲಿ ಹೊಸ ಮನ್ವಂತರ ಸೃಷ್ಟಿಸಿದವರಾಗಿದ್ದಾರೆ.

ಬಂಡಾಯದಲಿತ ಕವಿಯಾದ ಡಾ.ಚನ್ನಣ್ಣ ವಾಲೀಕಾರ ಆಧುನಿಕ ವಚನಕಾರರು ಕೂಡ ಆಗಿದ್ದು, ಗಮನಿಸಬೇಕು. ಅಸಮಾನತೆ, ಶೋಷಣೆ, ಹೆಣ್ಣಿನ ಚಿಂತನೆಗಳ ಹಿನ್ನೆಲೆ ಇವರ ವಚನಗಳ ರಚನೆಗೆ ಪ್ರೇರಣೆ ನೀಡಿವೆ. ಸಹಜವಾದ ಶಿಥಿಲ ಶಿಲ್ಪಿಗಳು ಬಂದು 'ವಾಲೀಕಾರ ಚನ್ನಣ್ಣ' ಎಂಬ ಅಂಕಿತದಿಂದ ಗಮನ ಸೆಳೆದಿದ್ದಾರೆ. ಮುನ್ನೂರು ಮೂರು ವಚನಗಳ 'ತ್ರಿ ನಾಟ್ ತ್ರಿ' ಎಂಬ ಹೆಸರಿನಿಂದ ಗಮನ ಸೆಳೆದಿವೆ. ಕೋಪ, ಸಿಟ್ಟು, ಆವೇಶ, ಪ್ರತಿಭಟನೆಯ ಜೊತೆಗೆ ದಾಂಪತ್ಯ ಜೀವನ ದರ್ಶನದ ಕಾಳಜಿಗಳು ಅಭಿವ್ಯಕ್ತಿಗೊಂಡಿವೆ. ಸೃಷ್ಟಿಯ ನೆಲೆಗಳನ್ನು ಕವಿಗಳಾದವರು ವಚನಗಳ ಮೂಲಕ ಹೇಗೆ ಸಾಗ ಹಾಕುತ್ತಾರೆಂದರೆ.

**ಮಳೆಗೆರೆದಾಗ ಬೆಳೆಯಯ್ಯ ಹೊಟ್ಟೆಗೆ**
**ಬದುಕೆಲ್ಲಾ ಸುಡುಗಾಡವೆಂದಾತ ನಮ್ಮ ಚನ್ನಣ್ಣ ವಾಲೀಕಾರ.**

ಎಂದು ವಾಲೀಕಾರರು ಇಲ್ಲಿ ಆಧ್ಯಾತ್ಮಿಕ ದೃಷ್ಟಿಕೋನದ ಬದಲಾಗಿ ವಾಸ್ತವಿಕ ಶೃಂಗಾರದ ರಸ ನಿರೂಪಣೆ ಮಾಡಿದ್ದಾರೆ. ಮನುಷ್ಯ ತನ್ನ ಅಸ್ತಿತ್ವ ಗುಣ, ಸಮಭಾವ ಉಳಿಸಿಕೊಳ್ಳಬೇಕು ಎಂದಿದ್ದಾರೆ. ಮನುಷ್ಯ ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳಬೇಕು.

**ನೀನೆದ್ದರೆ ನಿನ್ನ ಪಾಲಿನ ಜಗವೇಳುವುದು**

**ನೀನು ಬಿದ್ದರೆ ನಿನ್ನ ಬಾಳಿನ ಬಗ ಬೀಳುವುದು**
**ನೀನು ನಿರ್ಧರಿಸದಿದ್ದರೆ ಏನು ಆಗುವುದಿಲ್ಲ**

ಬೇವಿನ ಮರ ಬೇವಿನ ಮರವಾಗುವುದೇ ಹೊರತು ಮಾವಿನ ಮರ ಹೇಗಾಗುವುದೆಂದು ಕೇಳಿದಾತ ನಮ್ಮ ವಾಲೀಕಾರ ಚನ್ನಣ್ಣನು ತಾವು ಕಂಡದ್ದನ್ನು ಕಂಡ ಹಾಗೆಯೇ ತಿಳಿಸಿದ್ದಾರೆ.

ಡಾ.ಕೆ.ಬಿ.ಬ್ಯಾಳಿ ಅವರು 'ಶ್ರೀ ಗುರುವೆ' ಎಂಬ ಅಂಕಿತದಿಂದ ಆಧುನಿಕ ವಚನ ರಚಿಸಿದ್ದಾರೆ. ಪ್ರೀತಿ, ದೇಶಪ್ರೇಮ, ನಾಡುನುಡಿ, ಧರ್ಮದ ಅಧಃಪತನ, ಭಾವೈಕ್ಯತೆ, ಶಾಂತಿಗಳ ಕುರಿತಾದ ವಚನ ಗಮನ ಸೆಳೆಯುತ್ತವೆ. 'ನೂರಾ ಒಂಭತ್ತು ವಚನಗಳು' ಅವರ 109 ವಚನಗಳ ಸಾರ ಇವರಲ್ಲಿ ಬಂದಿರುವುದು ಒಂದು ವಿನೂತನ ಸೃಷ್ಟಿ.

ಸಿದ್ಧರಾಮ ಪೋಲೀಸ್ ಪಾಟೀಲರು ವೃತ್ತಿಯಿಂದ ಇಂಜಿನೀಯರ್ ಆಗಿದ್ದು, ಪ್ರವೃತ್ತಿಯಿಂದ ಸಾಹಿತಿಯಾದವರು. ಆಧುನಿಕ ವಚನಗಳನ್ನು ಇವರು ಬರೆದಷ್ಟು ಯಾರೂ ಬರೆದಿಲ್ಲ. ಜೊತೆಗೆ ಕಲಬುರ್ಗಿಯ ಭಾಷೆಯನ್ನು ಕಾವ್ಯಆಧುನಿಕ ವಚನದಲ್ಲಿ ದುಡಿಸಿಕೊಂಡವರು ಬೇರಾರು ಸಿಗಲಾರರು. ಅಷ್ಟೊಂದು ಪ್ರಾದೇಶಿಕ ಭಾಷೆಯನ್ನು ಎತ್ತಿ ಹೇಳಿದ್ದಾರೆ. ಇವರ ವಚನ 'ಜನಪದ ಕಾವ್ಯ ಹೊಳೆಯಾಗಿ ಹರಿಯುತ್ತಿದೆ ಮನೆ ಮನೆಯ ಒಳಗೆ ಸತ್ಯಣ' ಎನ್ನುವ ಅಂಶ ಇವರ ವಚನದಲ್ಲಿ ಕಾಣಬಹುದು.

ತ್ರಿಪದಿಗಳಲ್ಲಿ ವಚನ ರಚಿಸಿದ್ದಾರೆ. ಐದು ಸಾವಿರ ವಚನ ರಚಿಸಿದ್ದು ಸಾಮಾನ್ಯ ಸಂಗತಿಯಲ್ಲ. ಸತ್ಯಜ್ಞನ ವಚನಗಳು ಎಂದು ಮುದ್ರಿಸಿದ್ದಾರೆ. ಅವುಗಳಲ್ಲಿ ಇನ್ನೂ ಹಲವು ಪ್ರಕಟಿತವಾಗಿವೆ. ಸರ್ವಜ್ಞನ ಪ್ರಭಾವ, ತ್ರಿಪದಿಯ ಪ್ರಭಾವ ಇವರ ವಚನಗಳ ಮೇಲೆ ಆಗಿದೆ. ಅದರಂತೆ ಶರಣರ ಪ್ರಭಾವ ವಚನದ ಮೇಲಾಗುವುದರಿಂದ ಎರಡು ಭಾಷಾ ಸಾಮರ್ಥ್ಯ, ಎರಡು ಸಂವೇದನಗಳ ಮೂಲಕ ರಚಿಸಿದ್ದು ವಿಶಿಷ್ಟವೆನಿಸಿದೆ. ಸಮಾಜದ ಅನೇಕ ಕುಂದುಕೊರತೆಗಳನ್ನು ವ್ಯಂಗ್ಯ, ವಿಡಂಬನೆಗಳ ಮೂಲಕ ಹೇಳುವ ನೇರ ನುಡಿಗಳು ಇದರಲ್ಲಿ ಕಾಣುತ್ತೇವೆ. ಸತ್ಯಜ್ಞನ ಅಂಕಿತ ಇಟ್ಟುಕೊಂಡು ಬಹುಮುಖ ನೆಲೆಯಲ್ಲಿ ಚಿಂತಿಸಿದ್ದಾರೆ. ಇವರ ವಚನಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಬಿ.ಎಸ್.ಖುಬಾ ಬೀದರ್ ಜಿಲ್ಲೆಯ ಗಡವಂತಿಯನವರು. 'ಹುಲಿಯಸಿದ್ದೇಶ್ವರ' ಅಂಕಿತದಿಂದ "ಶತಕಾಂತ್ಯದ ವಚನ" ಎಂಬ ವಚನಗಳ ಸಂಕಲನ ಹೊರ ತಂದಿದ್ದಾರೆ. ಸಮಕಾಲೀನ ಸಾಮಾಜಿಕ ಸಂವೇದನೆಗಳು ಇವರ ವಚನದಲ್ಲಿ ಕಾಣುತ್ತೇವೆ. ಬದುಕಿನ ನಾನಾ ಮುಖಗಳನ್ನು ಕೆದಕುವ ವಚನಕಾರರಲ್ಲಿ ಹೊಸ ನೋಟಗಳನ್ನು ಡಾ.ಶರಣಬಸಪ್ಪ ಅಪ್ಪ ಪೀಠಾಧಿಪತಿಗಳಾಗಿದ್ದುಕೊಂಡು ಆಧುನಿಕ ರಚನೆ ಮಾಡಿದ್ದಾರೆ. 'ಮಹಾದಾಸೋಹಿ ಶರಣ ಬಸವ' ಅಂಕಿತದಿಂದ ವಚನ

ರಚಿಸಿದ್ದಾರೆ. ಇಪ್ಪತ್ತೆರಡು ವಚನಗಳು ದಾಸೋಹಕ್ಕೆ ಒಳಪಟ್ಟಿದ್ದರು ಕೂಡಾ ವೀರಶೈವ ಧರ್ಮದ ಚಿಂತನೆಯಲ್ಲಿ ಅರ್ಥಗರ್ಭಿತವಾಗಿ ಮೂಡಿ ಬಂದಿವೆ. ಒಂದೊಂದು ವಚನವು ಹಲವು ಮುಖಗಳ ನೆಲೆಯಲ್ಲಿ ವಿಮರ್ಶೆಗೆ ಒಳಪಡುತ್ತಲಿವೆ. ಗಂಭೀರ ಚಿಂತನೆ, ಆಳವಾದ ಒಳನೋಟಗಳನ್ನು ಅವರ ಆಧುನಿಕ ವಚನದಲ್ಲಿ ಕಾಣಬಹುದಾಗಿದೆ.

ಇವರಂತೆ ಸಿದ್ಧರಾಮ ಹಿರೇಮಠರು 'ಸಿಹಿ' ಎಂಬ ಕಾವ್ಯನಾಮದಿಂದಲೇ ಅಂಕಿತವನ್ನು ಇಟ್ಟುಕೊಂಡು ವಚನ ರಚಿಸಿದ್ದಾರೆ. 108 ತ್ರಿಪದಿಗಳ ಮೂಲಕ ವಚನ ರಚಿಸಿದ್ದಾರೆ. 'ಸಿದ್ದೇಶ್ವರ ವಚನಗಳು' ಎಂಬ ಹೆಸರಿನಿಂದ ಪ್ರಕಟವಾಗಿದೆ. ಕಾಯಕ ಹನುಮಂತರಾವ ಪೋತಕಪಲ್ಲಿ ಅವರು ವಚನಾನಂದ ಅಂಕಿತದಲ್ಲಿ ವಚನ ರಚಿಸಿದ್ದಾರೆ. ಶ್ರೀ ಗುರುಲಿಂಗ ಹಾಲಳ್ಳಿ ಅವರು 105 ವಚನ ಬರೆದಿದ್ದಾರೆ. ಗುರು ಬಸವ ಪ್ರಿಯ ಕೂಡಲ ಸಂಗಮದೇವಾ ಭೀಮರಾವ್ ಅವರು 'ನಮಿಸುವೆ ನಿನ್ನಾ' ಎಂಬ ಅಂಕಿತದಿಂದ 'ಮುಚ್ಚಿಡದ ನುಡಿಗಳು' ವಚನ ಸಂಕಲನ. ನಮಿಸುವೆ ನಿನ್ನ ಎಂಬ ಮೂರು ಆಧುನಿಕ ವಚನ ಸಂಕಲನ ತಂದಿದ್ದಾರೆ. ಬಸವೇಶನಾರ ಸೂಗೂರ ಮಠ ಅವರು ಬಸವಲಿಂಗ ಅಂಕಿತದಲ್ಲಿ 'ವಚನ ಬಾಗಿನ' ಹೊರತಂದಿದ್ದಾರೆ. ಇದರಲ್ಲಿ 121 ವಚನಗಳು ಸೇರಿವೆ. ಬಸವರಾಜ ರುಮಾಲ ಅವರು 'ವಚನ ದರ್ಶನ' ಕೃತಿ ಪ್ರಕಟಿಸಿದ್ದಾರೆ. ಇದರಲ್ಲಿ 42 ವಚನಗಳು 'ಷಟ್‌ಸ್ಥಲ ಬ್ರಹ್ಮ ಗಂಗಾಧರ' ಅಂಕಿತದಿಂದ ಮೂಡಿ ಬಂದಿವೆ.

ನೀತಿ ಧರ್ಮದ ಮೇಲೆ ವಚನಗಳು ಬೆಳಕು ಚೆಲ್ಲಿವೆ. 'ನಾಚೆ' ಎಂದೇ ಪ್ರಸಿದ್ಧವಾದ ನಾರದ ಗಡ್ಡೆಯ ಚನ್ನಬಸವೇಶ್ವರರು ಕೂಡಾ ಪೀಠಾಧಿಪತಿ ಗುರುಗಳಾಗಿದ್ದುಕೊಂಡು, ಆಧುನಿಕ ವಚನ ತ್ರಿಪದಿಯ ಮಾದರಿಯಲ್ಲಿ ರಚಿಸಿದ್ದಾರೆ. ಅವುಗಳಲ್ಲಿ ಧರ್ಮ, ಸಮಾಜ, ಶಿಕ್ಷಣಕ್ಕೆ ಒತ್ತು ನೀಡಿದ್ದಾರೆ. ಹುಲಸೂರು ಶಿವಾನಂದ ಸ್ವಾಮಿಗಳು ಕೂಡ ಆಧುನಿಕ ವಚನಗಳನ್ನು ರಚಿಸಿದ್ದಾರೆ. ಭಾಲ್ಕಿ ಹೀರೇಮಠ ಮ.ಘ.ಚ.ಬಸವಲಿಂಗ ಪಟ್ಟದೇವರು ಕೂಡಾ ಆಧುನಿಕ ವಚನಗಳನ್ನು ಪ್ರಕಟಿಸಿದ್ದಾರೆ. ಕೌಠಾ(ಬಿ) ಗ್ರಾಮದ ಸಿದ್ಧರಾಮ ಬೆಲ್ದಾಳ ಶರಣರು ಕೂಡಾ ಆಧುನಿಕ ವಚನ ರಚಿಸಿದ್ದಾರೆ. ದಲಿತ ಬಸವ ತತ್ವದ ಚಿಂತನೆಗಳ ಹಿನ್ನೆಲೆಯಲ್ಲಿ ಗಟ್ಟಿಯಾಗಿ ಆಧುನಿಕ ವಚನ ರಚಿಸಿದ್ದಾರೆ. ಡಾ.ಸರಸ್ವತಿ ಚಿಮ್ಮಲಗಿ ಆಧುನಿಕ ವಚನಕಾರ್ತಿಯಾಗಿ ಮಿಂಚಿದ್ದಾರೆ. ಬಂಡಾಯ ಹಾಗೂ ಸ್ತ್ರೀಪರ ಧೋರಣೆಯನ್ನು ಹೊಂದಿ 'ಎಡಬಿಡಂಗಿ ದೇವ' ಅಂಕಿತ ಬಳಸಿಕೊಂಡು 'ಎಡಬಿಡಂಗಿ ದೇವರ ವಚನಗಳು' ಎಂಬ ಕೃತಿ ಪ್ರಕಟಿಸಿದ್ದಾರೆ. ಇಂದಿನ ದಿನದಲ್ಲಿ ಭ್ರಷ್ಟ ವ್ಯವಸ್ಥೆ, ಸ್ವಾಮಿಗಳ ದುರಹಂಕಾರ, ಶಿಕ್ಷಣ ಪದ್ಧತಿ ಮುಂತಾದವುಗಳನ್ನು ಕುರಿತು ತೀವ್ರವಾಗಿ ಖಂಡಿಸಿದ್ದಾರೆ.

**"ಸತ್ಯವನ್ನೆಲ್ಲಾ ಹೂತು ರೌಜಾರೋಷವಾಗಿ ದೇಶ ಕೊಳ್ಳೆ ಹೊಡೆದ**
**ಕುಣಿಯುವ ಹೇಸಿಕೆಲಸವೆ ಇಂದು ರಾಜಕಾರಣವಾಗಿದೆ**
**ಅನ್ನದಾನಕ್ಕಿಂತ ಜ್ಞಾನದಾನ ಲೇಸೆಂದು**
**ಹೆತ್ತವರ ಕರುಳ ಕಿತ್ತಿ ಬರುವಷ್ಟು**
**ದಾಸೋಹದ ಹಣಗಳಿಕೆಯ ಸೂತ್ರ ಮೆಚ್ಚಬೇಕು"**

ಎಂದು ಇಲ್ಲಿ ಅಧಃಪತನಕ್ಕೆ ಇಳಿದ ವ್ಯಕ್ತಿಯ ಅಪಮೌಲ್ಯಗಳ ಕುರಿತು, ಆತ್ಮ ವಂಚಕರ ಕುರಿತು ನೀತಿ ಬಯಲಿಗೆಳೆಯುತ್ತಾರೆ.

ಡಾ.ಜಯಶ್ರೀ ದಂಡೆಯವರು 'ಸ್ವಭಾವದ ವಚನಗಳು' ಎನ್ನುವ ಆಧುನಿಕ ವಚನ ಸಂಕಲನವನ್ನು 'ಮಹಾಂತೇಶ' ಎಂಬ ಅಂಕಿತದಲ್ಲಿ ಹೊರ ತಂದಿದ್ದಾರೆ. ಆಧ್ಯಾತ್ಮ ನೀತಿ ಬೋಧನೆಯ ಜೊತೆ ಸಾಮಾಜಿಕ ಚೌಕಟ್ಟಿನಲ್ಲಿ ಸಾಂಸ್ಕೃತಿಕ ಆಯಾಮಗಳನ್ನು ಬಿತ್ತರಿಸುವ ಸ್ವಭಾವದ ವಚನಗಳು ರಚನೆ ಮಾಡಿದ್ದಾರೆ. ಇವರ ವಚನಗಳು ಓದಿಸಿಕೊಂಡು ಆಸಕ್ತಿ ಹುಟ್ಟಿಸುವ ವಚನಗಳಾಗಿವೆ. ತತ್ವನಿಷ್ಠತೆ ಹಾಗೂ ಧರ್ಮ ಸಿದ್ಧಾಂತಗಳು ಅವರಲ್ಲಿ ಕಾಣುತ್ತೇವೆ.

ಶ್ರೀಮತಿ ನಾಗದೇವಿ ಪಾಟೀಲ, ಶ್ರೀಮತಿ ಪ್ರಮೀಳಾ ಜಾನಪ್ಪ ಗೌಡರು, ವಿಜಯಶ್ರೀ ಸಬರದ, ನಾಗಮ್ಮ ಮುಗಳಿ, ಬಿ.ಶೇಖರಪ್ಪ, ಬಿ.ಮಹಾದೇವಪ್ಪ, ಮಹಾಂತ ಪ್ರಿಯ, ಡಾ.ಪಂಚಾಕ್ಷರಿ ಹಿರೇಮಠ, ಬಿ.ಆರ್.ಹಿರೇಮಠ, ಅನ್ನದಾನಯ್ಯ ಪುರಾಣಿಕ, ತಿಪ್ಪಣ್ಣ ಹೂಗಾರ, ಆದಯ್ಯ ಸ್ವಾಮಿ, ಪಿ.ಎಸ್.ಹಿರೇಮಠ, ಚಂದ್ರಶೇಖರ ಹೊಸೂರು, ಜಂಬಣ್ಣ ಅಮರಚಿಂತ, ಡಾ.ಎಸ್.ಎಂ.ಹಿರೇಮಠ (ಕಲಾತಪಸ್ವಿ), ಡಾ.ಪ್ರಭು ಖಾನಾಪೂರ, ಪ್ರೊ.ಸೂಗಯ್ಯ ಹಿರೇಮಠ (ಸೂಗೂರೇಶ್ವರ), ಪಂಚಾಕ್ಷರಿ ಪುಣ್ಯಶೆಟ್ಟಿ, ಅಬ್ದುಲ್ ಕರೀಂ, ರಾಮಣ್ಣ ಬಿಲ್ವಪತ್ರೆ, ಆದಿ ಮನತಪ್ಪ, ಸೂರ್ಯಕಾಂತ ಗುಣಕಿಮಠ, ಹೊಸೂರು ಶಶಿಕಾಂತ, ಲಕ್ಷ್ಮೀ ರೆಡ್ಡಿ, ಅಯ್ಯಪ್ಪಯ್ಯ ಹುಡಾ, ಮುಕ್ಕಣ್ಣ ಕರಿಗಾರ, ಅಮರೇಶ ಯಾತಗಲ್, ಅಮರೇಶ ಗುರಿಕಾರ, ಶಂಕ್ರಯ್ಯ ವಸ್ತ್ರದ, ಪ್ರಭುದೇವ ಪಾರಿಮನಿ, ಎ.ಸಿದ್ಧರಾಮಣ್ಣ, ಕೆ.ಸತ್ಯಾನಂದ, ಬಸವರಾಜ ಸಬರದ, ಗಿರಿರಾಜ ಹೊಸಮನಿ, ಎಸ್.ಶರಣಪ್ಪ, ಬೇ.ಗೊ.ರಮೇಶ, ಹುಸೇನಪ್ಪ ಹುಲ್ಲೂರು, ಪಂಡಿತ ಲಕ್ಷ್ಮೀದೇವಿ ಶಾಸ್ತ್ರಿ, ಜಂಗಮಶ್ರೀ, ದೇಶಾಂಶ ಹುಡುಗಿ, ಪಿ.ಸಿದ್ಧಲಿಂಗಮ್ಮ ಮುಂತಾದವರು ಹೈದರಬಾದ್ ಕರ್ನಾಟಕದಲ್ಲಿ ಆಧುನಿಕ ವಚನಗಳನ್ನು ರಚನೆ ಮಾಡುತ್ತಾ ಬಂದಿದ್ದಾರೆ. ಅವರ ವಚನಗಳನ್ನು ಕುರಿತು ಅಧ್ಯಯನವಾಗಬೇಕಿದೆ.

ಪ್ರೀತಿ ಶುಭಚಂದ್ರರು ಆಧುನಿಕ ವಚನಗಳನ್ನು ಕುರಿತು ಮಹಾಪ್ರಬಂಧ ರಚಿಸಿದ್ದಾರೆ. ಈ ಕುರಿತು ಸಂಶೋಧನೆ ಮಾಡಿದ್ದಾರೆ. ಡಾ.ರಾಜೇಂದ್ರ ಯರನಾಳೆಯವರು ಮೂಜಗಂ ಅವರ ಪೂರ್ಣಜ್ಞಾನ ವಚನಗಳನ್ನು ಕುರಿತು ಪಿಹೆಚ್.ಡಿ ಮಾಡಿದ್ದಾರೆ. ರಾಮಚಂದ್ರ ಗಣಾಪುರ ಅವರು ಕಲಬುರಗಿ ಜಿಲ್ಲೆಯ

ಆಧುನಿಕ ವಚನಕಾರರನ್ನು ಕುರಿತು ಎಂ.ಫಿಲ್ ಅಧ್ಯಯನ ಪೂರೈಸಿದ್ದಾರೆ. ಇಂತಹ ಕೆಲವೇ ಅಧ್ಯಯನಗಳು ಆಗಿವೆ. ಕೆಲವೊಂದು ಸಾಹಿತಿಗಳನ್ನು ಕುರಿತು ಮಾಡಿರುವ ಅಧ್ಯಯನದಲ್ಲಿ ಆಧುನಿಕ ವಚನಗಳ ಉಲ್ಲೇಖ, ಆಧುನಿಕ ವಚನ ಸಾಹಿತ್ಯ ಕುರಿತು ಕೃತಿ ರಚಿಸಿದ್ದಾರೆ. ಕರ್ನಾಟಕ ಹಾಗೂ ಹೈದರಬಾದ್ ಕರ್ನಾಟಕದ ಆಧುನಿಕ ವಚನಕಾರರ ಸಂಕಲನವನ್ನು ಶರಣಪ್ಪ ಗುಡದಿನ್ನಿಯವರು ಹೊರತಂದಿದ್ದಾರೆ. ಡಾ.ಗವಿಸಿದ್ಧಪ್ಪ ಪಾಟೀಲರು ಬೀದರ್ ಜಿಲ್ಲೆಯಲ್ಲಿ ಈಗಾಗಲೇ 8 ಆಧುನಿಕ ವಚನ ಸಮ್ಮೇಳನಗಳನ್ನು ಸಖಾಪುರದಲ್ಲಿ ಮಾಡಿದ್ದಾರೆ. ಇದು ಆಧುನಿಕ ವಚನಕಾರರ ಕುರಿತು ಚಿಂತನೆ ಮಾಡಲು ಸಹಕಾರಿಯಾಗಿದೆ. ಡಾ.ನೀಲಮ್ಮ ಕನ್ನಳ್ಳಿ ಅವರಿಂದ ಆಧುನಿಕ ವಚನ ಸಾಹಿತ್ಯ ಕುರಿತು ಸಣ್ಣ ಪುಸ್ತಕ ಹೊರ ಬಂದಿದೆ. ಈ ಎಲ್ಲ ಪ್ರಯತ್ನಗಳು ಹೈದರಬಾದ್ ಕರ್ನಾಟಕ ಭಾಗದ ಆಧುನಿಕ ವಚನ ಸಾಹಿತ್ಯಕ್ಕೆ ಬೆಳಕನ್ನು ಚೆಲ್ಲುವುದಕ್ಕೆ ಸಹಕಾರಿಯಾಗಿವೆ.

**ಪರಾಮರ್ಶನ ಗ್ರಂಥಗಳು:**

1. ಬುಳ್ಳಾ ಎನ್.ಬಿ., (2000), ಸಿದ್ಧಯ್ಯ ಪುರಾಣಿಕ ಜೀವನ ಸಾಹಿತ್ಯ, ಜ್ಯೋತಿಶ್ರೀ ಪ್ರಕಾಶನ, ಕಲಬುರಗಿ.
2. ನೀಲಮ್ಮ ಕತ್ನಳ್ಳಿ, (2000), ಮಹಾದೇವ ಬಣಕಾರ ಜೀವನ ಸಾಹಿತ್ಯ, ಶಹಬಾದ ಪ್ರಕಾಶನ, ಕಲಬುರಗಿ.
3. ಗವಿಸಿದ್ಧಪ್ಪ ಪಾಟೀಲ, (2015), ಆಧುನಿಕ ವಚನ ಸಿರಿ, ಮೇಘಾ ಪಬ್ಲಿಕೇಷನ್ಸ್, ಬೆಂಗಳೂರು.
4. ಗವಿಸಿದ್ಧಪ್ಪ ಪಾಟೀಲ, (2016), ತನು ಸವೆದಂತೆ ಆಧುನಿಕ ವಚನ ಸಂಕಲನ, ಸಾಕ್ಷಿ ಪ್ರತಿಷ್ಠಾನ, ಹುಮನಾಬಾದ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.